# ಆಹಾ ಸುದ್ದಿ!

★ ಸಸಿತೋಟ



ಚಿಲಿಯಲ್ಲಿ ಸರೋವರವೊಂದರ ನೀರು ಆವಿಯಾಗುವುದನ್ನು ತಡೆಯಲು ಕಪ್ಪು ರಂಗಿನ ಪ್ಲಾಸ್ಟಿಕ್ ಚೆಂಡುಗಳನ್ನು ಸಾವಿರಾರು ಸಂಖ್ಯೆಯಲ್ಲಿ ತೇಲಿಬಿಡಲಾಗಿದೆಯಂತೆ. ಬೇಗ ಬೇಗ ನೀರು ಆವಿಯಾಗಿ ಖಾಲಿ ಕೆರೆಯಂಗಳ ಲಭ್ಯವಾಗುವ ತಂತ್ರಜ್ಞಾನವಿದ್ದರೆ ಬೆಂಗಳೂರಿನ ರಿಯಲ್ ಎಸ್ಟೇಟ್ ಉದ್ಯಮಕ್ಕಾದರೂ ಲಾಭವಾಗುತ್ತಿತ್ತು.

ಪುರುಷನ ಹೃದಯಕ್ಕೆ ಮಾರ್ಗ ಹೊಟ್ಟೆಯ ಮೂಲಕ ಎಂಬ ಮಾತಿದೆ. ರುಚಿಕರವಾಗಿ ಅಡುಗೆ ಮಾಡುವ ಯುವತಿಯನ್ನು ಕಂಡರೆ ಆತನ ಹೃದಯದ ಲಬ್‌ಡಬ್ ಸ್ಪೀಡ್ ಜಾಸ್ತಿಯಾಗುವುದಂತೆ. ಆದರೆ ಲಂಡನ್ನಿನ ವಿಶ್ವವಿದ್ಯಾಲಯವೊಂದು ಪುರುಷನ ಲೈಂಗಿಕ ತೃಷೆಯ ಮುಂದೆ ಹೊಟ್ಟೆಯ ಹಸಿವೂ ಗೌಣವೇ ಎಂದು ಘನಂದಾರಿ ಸಂಶೋಧನೆ ನಡೆಸಿದೆಯಂತೆ. ಸೆಕ್ಸ್ ಕುರಿತ ಹಾರ್ಮೋನ್‌ಗಳು ಎರ್ರಾಬಿರ್ರಿ ವರ್ತಿಸಿ ಜಠರದ ಆ್ಯಸಿಡ್ ರಸಕ್ಕೂ ತಡೆಯೊಡ್ಡುತ್ತವೆ. ಆದರೆ ಮಹಿಳೆಯರು ಮಾತ್ರ ಮೊದಲು ಅಡುಗೆ ಕೋಣೆಗೆ ಇಣುಕುತ್ತಾರಂತೆ, ಆಮೇಲೆ ಮಲಗುವ ಮನೆಯತ್ತ. ಹೆಣ್ಣು-ಗಂಡಿನ ಮಧ್ಯೆ ಮತ್ತೊಂದು ವ್ಯತ್ಯಾಸ ಸಿಕ್ಕಂತಾಯ್ತು.



ಈಚೆಗೆ ಈಕ್ವೆಡಾರ್‌ನಲ್ಲಿ ನಡೆದ ಹಚ್ಚೆ ಹಾಗೂ ದೇಹದ ರೂಪಾಂತರ ಮೇಳದಲ್ಲಿ ಕೊಲಂಬಿಯಾದ ಇರಾಸೊ ಕತ್ತರಿಸಿದ ನಾಲಗೆ ಪ್ರದರ್ಶಿಸಿ ಶಹಬಾಸ್‌ಗಿರಿ ಪಡೆದನಂತೆ. ಜಗಳವಾಡುವಾಗ 'ನಿನಗೇನು ಎರಡು ನಾಲಗೆಯಾ?' ಎಂದು ಪ್ರಶ್ನಿಸುವ ಮೊದಲು ಎದುರಾಳಿಯ ನಾಲಗೆ ಮೇಲೊಂದು ನಜರ್ ಇಡುವುದು ಒಳಿತು.



ಬಾಲ್ಟಿಕ್ ಸಮುದ್ರದ ಯೂಸ್‌ಡಂ ದ್ವೀಪದಲ್ಲಿ ನಡೆದ 'ವಿಶ್ವವೇ ತಲೆಕೆಳಗು' ಪ್ರದರ್ಶನದಲ್ಲಿ ಪೋಲಂಡ್‌ನ ಈ ಉದ್ಯಮಿಗಳು ತಲೆ ಕೆಳಗಾಗಿ ನಿರ್ಮಿಸಿದ ಕಾರನ್ನು ಪ್ರದರ್ಶಿಸಿದರು. ಹೊಸ ತರಹ ತಲೆ ಓಡಿಸಿದ್ದು ಬೆರಗು ಮೂಡಿಸುವಂಥದ್ದೇ. ಚಾಲನೆಯಲ್ಲೂ ಇಂಥದ್ದೇ ತಲೆ ಓಡಿಸಿದರೆ.. 'ಆಜ್ ಮೆ ಊಪರ್.. ಆಸ್ಮಾ ನೀಚೆ..' ಆಗಬಹುದು.



ಮೆಕ್ಸಿಕೋದ ಭೂಗತ ಮಾದಕದ್ರವ್ಯ ಕಳ್ಳಸಾಗಣೆದಾರ ಗುಜ್‌ಮ್ಯಾನ್ ತಂಡ ತೋಡಿದ ಭೂಗತ ರೈಲ್ವೆ ಸುರಂಗವಿದು. ಮೆಕ್ಸಿಕೊ ಹಾಗೂ ಅಮೆರಿಕದ ಗಡಿಯಲ್ಲಿ 800 ಮೀಟರ್ ಉದ್ದದ ಇದನ್ನು ನಿರ್ಮಿಸಿಕೊಂಡು ಅಮೆರಿಕಕ್ಕೆ ಟನ್‌ಗಟ್ಟಲೆ ಮಾದಕ ವಸ್ತು ಸಾಗಿಸಲಾಗುತ್ತಿತ್ತು. ಹೊಸ ರೈಲು ಮಾರ್ಗ ನಿರ್ಮಿಸಲು ಟೇಬಲ್‌ನಿಂದ ಟೇಬಲ್‌ಗೆ ಕಾಗದಪತ್ರಗಳ ಓಡಾಟಕ್ಕೇ ಇಲ್ಲಿ ಕಷ್ಟಪಡಬೇಕು, ಆದರೆ ಅಲ್ಲಿ?

ಡ್ರೆಸ್‌ಗೇಟ್ ನೆನಪಿರಬೇಕಲ್ಲ! ಕಪ್ಪು ಹಾಗೂ ನೀಲಿ ಉಡುಪನ್ನು ಕೆಲವರು ಬಿಳಿ ಮತ್ತು ಬಂಗಾರದ ವರ್ಣದ್ದು ಎಂದು ಹೇಳಿ ವಿಜ್ಞಾನಿಗಳ ಮೆದುಳನ್ನೇ ತಿರುಗಿಸಿದ್ದು. ಈಗ ವಿಜ್ಞಾನಿಗಳು ಅಂಥವರ ಮೆದುಳಿನ ಎಂಆರ್‌ಐ ಮಾಡಿ ವಿಶೇಷ ಮೆದುಳು ಹೆಚ್ಚು ಕೆಲಸ ಮಾಡಿ ಎಲ್ಲ ಬಣ್ಣವೂ ಬಿಳಿ ಬಣ್ಣದಿಂದ ಹೊರಹೊಮ್ಮುತ್ತದೆ, ಹೀಗಾಗಿ ಕಪ್ಪನ್ನು ನೀಲಿ ಎಂದು ವಿಶ್ಲೇಷಿಸಿದೆ ಎಂದಿದ್ದಾರಂತೆ. ಏಳು ಬಣ್ಣ ಸೇರಿ ಬಿಳಿಯ ಬಣ್ಣವಾಗಿದೆ ಎಂಬ ಸರಳ ವಿಷಯ ನಮಗೆ ಹಾಡಿನ ಮೂಲಕವೇ ಗೊತ್ತಿತ್ತಲ್ಲ.. ಛೆ!